ಓ.ಎಸ್. 18/2017, ಡಿ.ಡಬ್ಲ್ಯೂ.1 ಹೆಸರುಃ ಪ್ರಭುಲಿಂಗಯ್ಯ

**ದಿಃ23-09-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ವಾದಿಯರ ಪರ ಶ್ರೀ ಜಿ.ಎಸ್.ಎಸ್. ವಕೀಲರಿಂದಃ**

ನಾನು ಎಂ.ಕಾಂ. ವ್ಯಾಸಂಗ ಮಾಡಿದ್ದೇನೆ. ನನ್ನ ಸ್ವಂತ ಊರು ನಂದನಹೊಸೂರು ಗೊಲ್ಲರಹಟ್ಟಿ. ನನ್ನ ತಂದೆಯ ಹೆಸರು ಜಿ.ಕೆ.ರಂಗಪ್ಪ. ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು. ನಾನು 1997 ರಲ್ಲಿ ಕೆಲಸಕ್ಕೆ ಸೇರಿರುತ್ತೇನೆ. ಈ ನ್ಯಾಯಾಲಯದಿಂದ ನನಗೆ ದಿನಾಂಕ 08.07.2017 ರಂದು ನೋಟೀಸು ಬಂದಿತ್ತು ಎಂದರೆ ಸರಿ. ಸದರಿ ನೋಟೀಸನ್ನು ನಾನು ತಿರಸ್ಕರಿಸಿರುತ್ತೇನೆ ಎಂದರೆ ಸಾಕ್ಷಿ ನಾನು ಇರಲಿಲ್ಲ ಎಂದು ಹೇಳುತ್ತಾರೆ. ನನಗೆ ದಿನಾಂಕ 06.12.2017 ರಂದು ನೋಂದಣಿ ಅಂಚೆಯ ಮೂಲಕ ನೋಟೀಸು ಬಂದಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸದರಿ ನೋಟೀಸನ್ನು ಸ್ವೀಕರಿಸಿದ್ದೇನೆ ಎಂದು ಹೇಳುತ್ತಾರೆ. ನಾನು ಸದರಿ ನೋಟೀಸನ್ನು ಸ್ವೀಕರಿಸಿದ ನಂತರದಲ್ಲಿ ನ್ಯಾಯಾಲಯಕ್ಕೆ ಹಾಜರಾಗಿರುವ ಬಗ್ಗೆ ನೆನಪಿಲ್ಲ. ನನಗೆ ನ್ಯಾಯಾಲಯದಿಂದ ದಾವಾ ಸಮನ್ಸ್ ಜಾರಿಯಾದ ನಂತರದಲ್ಲಿ ನ್ಯಾಯಾಲಯಕ್ಕೆ ಹಾಜರಾಗದೆ ಪತ್ರಿಕಾ ಪ್ರಕಟಣೆಯಲ್ಲಿ ಸಮನ್ಸ್‌ನ್ನು ಜಾರಿಗೊಳಿಸಿದ ನಂತರ ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ದಿನಾಂಕ 29.02.2002 ರಂದು ಮಹಲಿಂಗಪ್ಪ ಎನ್ನುವವರಿಗೆ ಶುದ್ಧ ಕ್ರಯಪತ್ರವನ್ನು ಮಾಡಿಕೊಟ್ಟಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕ 20.02.2002 ರ ನೊಂದಣಿ ಕ್ರಯಪತ್ರದ ಗಣಕೀಕೃತ ದೃಡೀಕೃತ ಪ್ರತಿಯನ್ನು ತೋರಿಸಲಾಗಿ, ಸಾಕ್ಷಿ ದಿನಾಂಕ 29.02.2002 ರಂದು ನಂದನಹೊಸೂರು ಗ್ರಾಮದ 01 ಗುಂಟೆ ಜಮೀನನ್ನು ಮಾರಾಟ ಮಾಡಿರುವುದಾಗಿ ಒಪ್ಪಿಕೊಂಡಿದ್ದು, ಸಾಕ್ಷಿಗೆ ತೋರಿಸಲಾದ ದಾಖಲಾತಿಯನ್ನು ನಿಪಿ.5 ಎಂದು ಗುರುತಿಸಲಾಯಿತು. ನಾನು ದಿನಾಂಕ 03.04.2008 ರಂದು ಎನ್.ಪಾರ್ವತಮ್ಮ ಕೋಂ ಓಂಕಾರಪ್ಪ ರವರಿಗೆ ನಂದನಹೊಸೂರು ಗ್ರಾಮದ 01 ಗುಂಟೆ ಸ್ವತ್ತನ್ನು ಮಾರಾಟ ಮಾಡಿದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿಗೆ ದಿನಾಂಕ 03.04.2008 ರ ನೋಂದಣಿ ಕ್ರಯಪತ್ರದ ಗಣಕೀಕೃತ ಪ್ರತಿಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲಾತಿಯನ್ನು ಒಪ್ಪಿಕೊಂಡ ಮೇರೆಗೆ ನಿಪಿ.6 ಎಂದು ಗುರುತಿಸಲಾಯಿತು.

3. ಸಾಕ್ಷಿಗೆ ದಿನಾಂಕ 29.02.2008, 10.03.2008, 03.11.2011, 30.10.2011, 03.11.2011, 06.07.2019, 06.07.2019 ಮತ್ತು 06.11.2019 ರಂದು ಕ್ರಮವಾಗಿ ಕೆಂಚಪ್ಪ ಬಿನ್ ಬಸಪ್ಪ, ದ್ಯಾಮಪ್ಪ ಬಿನ್

ರಾಜಶೇಖರಪ್ಪ, ಗಂಗಮ್ಮ ಕೋಂ ಲಕ್ಷ್ಮೀಪತಿ, ಶಂಕರಮೂರ್ತಿ ಬಿನ್ ಗೋಪಾಲಪ್ಪ, ರತ್ನಮ್ಮ ಕೋಂ ಶ್ರೀನಿವಾಸ್, ಟಿ.ರಮೇಶ್ ಬಿನ್ ತಿಪ್ಪೇಸ್ವಾಮಿ, ಮತ್ತು ಡಿ.ಜಯಮ್ಮ ಕೋಂ ಚಿತ್ರಶೇಖರಪ್ಪರವರಿಗೆ ಜಾರಿಮಾಡಿಕೊಟ್ಟಿರುವ ನೋಂದಣಿ ಕ್ರಯಪತ್ರಗಳ ಗಣಕೀಕೃತ ಪ್ರತಿಗಳನ್ನು ತೋರಿಸಿದ್ದು, ಅವುಗಳ ಪ್ರಕಾರ ನನಗೆ ಸೇರಿದ ನಂದನ ಹೊಸೂರು ಗ್ರಾಮದ ಸ್ವತ್ತನ್ನು ಮಾರಾಟ ಮಾಡಿರುವುದಾಗಿ ಹೇಳುತ್ತಾರೆ. ಸಾಕ್ಷಿ ಒಪ್ಪಿಕೊಂಡ ದಾಖಲಾತಿಗಳನ್ನು ನಿಪಿ.7 ರಿಂದ 14 ಎಂದು ಗುರುತಿಸಲಾಯಿತು.

4. ಈ ದಾವೆಯನ್ನು ಸಲ್ಲಿಸಿದ ನಂತರದಲ್ಲಿ ಹೊಳಲ್ಕೆರೆ ನಗರದಲ್ಲಿರುವ 16 ಗುಂಟೆ ಜಮೀನನ್ನು ಕಮಲಮ್ಮ ಕೋಂ ಗುರುಶಾಂತಪ್ಪ ರವರಿಗೆ ದಿನಾಂಕ 20.09.2018 ರಂದು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ತೋರಿಸಲಾದ ದಾಖಲಾತಿಯನ್ನು ನಿಪಿ.15 ಎಂದು ಗುರುತಿಸಲಾಯಿತು. ಕಮಲಮ್ಮ ರವರು ಗುಂಡೇರಿ ಗ್ರಾಮದ ವಾಸಿ ಎಂದರೆ ಸರಿ. ನನ್ನ ಮತ್ತು ಕಮಲಮ್ಮ ರವರ ನಡುವೆ ಮೊದಲಿನಿಂದಲೂ ಹಣಕಾಸಿನ ವ್ಯವಹಾರ ಇದೆ ಎಂದರೆ ಸರಿ. ಕಮಲಮ್ಮ ರವರ 2 ನೇ ಮಗ ಸತೀಶ ಎಂದರೆ ಸರಿ. ಕಮಲಮ್ಮರವರಿಗೆ 16 ಗುಮಟೆ ಜಮೀನನ್ನು ಮಾರಾಟ ಮಾಡುವ ಕಾಲಕ್ಕೆ ನಾನು, ನನ್ನ ಪತ್ನಿ, ನನ್ನ ತಂದೆ, ಕಮಲಮ್ಮ ಹಾಗೂ ಆಕೆಯ ಮಗನಾದ ಸತೀಶ ಕುಳಿತುಕೊಂಡು ವ್ಯವಹಾರ ಮಾಡಿದ್ದೆವು ಎಂದರೆ ಸರಿ. ಸದರಿ ಮಾತುಕತೆಯ ಕಾಲಕ್ಕೆ ಈ ದಾವೆಗೆ ಸಂಬಂಧಿಸಿದಂತೆ ನಿಡಿ.9 ರ ದಾಖಲಾತಿಯನ್ನು ಸೃಷ್ಟಿಸಿಕೊಂಡು ಸದರಿ ದಾಖಲಾತಿಗೆ ಕಮಲಮ್ಮರವರ ಮಗನಾದ ಸತೀಶರವರ ಸಹಿಯನ್ನು ಕೂಡ ಪಡೆದುಕೊಂಡು ಆ ಪ್ರಕಾರ ಸತೀಶನು ನನ್ನ ಪರವಾಗಿ ಸಾಕ್ಷಿ ನುಡಿಯುವಂತೆ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ.

5. ಯಾವುದೇ ಒಂದು ಕ್ರಯಪತ್ರವನ್ನು ಜಾರಿಮಾಡಿಕೊಟ್ಟಾಗ ಬರೆದುಕೊಟ್ಟವರ ಹೆಸರು ಮತ್ತು ಬರೆಸಿಕೊಂಡವರ ಹೆಸರು ಋಣಭಾರ ರಾಹಿತ್ಯ ಪ್ರಮಾಣ ಪತ್ರದಲ್ಲಿ ನಮೂದು ಆಗುತ್ತದೆ ಎಂದರೆ ಸರಿ. ಸಾಕ್ಷಿಗೆ ದಾವಾ ಸ್ವತ್ತಿನ ಕುರಿತಾಗಿ ನಮೂನೆ 15 ರ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ತೋರಿಸಿ ಅದರಲ್ಲಿ ಬರೆದುಕೊಟ್ಟವರು ಎಂಬಲ್ಲಿ ನನ್ನ ಹೆಸರು ಹಾಗೂ ಬರೆಸಿಕೊಂಡವರು ಎಂಬಲ್ಲಿ ವಾದಿಯ ಹೆಸರು ನಮೂದು ಇದೆ ಎಂದರೆ ಸರಿ. ಯಾವುದೇ ಒಂದು ಕ್ರಯಪತ್ರವನ್ನು ನೋಂದಣಿ ಮಾಡಿಸುವಾಗ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಬರೆದುಕೊಟ್ಟವರು ಮತ್ತು ಬರೆಸಿಕೊಂಡವರ ಹೆಸರು ನಮೂದು ಆಗುತ್ತದೆ ಎಂದರೆ ಸರಿ.

6. ನಾನು ಫೆಡರಲ್ ಬ್ಯಾಂಕಿನಲ್ಲಿ ಸಾಲ ಪಡೆದುಕೊಳ್ಳುವ ಕಾಲಕ್ಕೆ ಕಾನೂನುತಜ್ಞರ ಅಭಿಪ್ರಾಯವನ್ನು ಪಡೆದುಕೊಂಡು ಸಾಲ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ರೂ.2,50,000/- ಕ್ಕಿಂತ ಹೆಚ್ಚು ಸಾಲ ನೀಡುವಾಗ, ಬ್ಯಾಂಕಿನವರು ಸಾಲಗಾರರಿಗೆ ಸೇರಿದ

ಸ್ವತ್ತನ್ನು ಅಡಮಾನ ಮಾಡಿಕೊಂಡು ಬ್ಯಾಂಕು ಸಾಲ ಮಂಜೂರಾತಿ ಮಾಡುತ್ತದೆ ಎಂದರೆ ಸರಿ. ಆ ರೀತಿಯಾಗಿ ಸ್ವತ್ತನ್ನು ಅಡಮಾನ ಮಾಡಿಕೊಳ್ಳುವ ಕಾಲಕ್ಕೆ ಬ್ಯಾಂಕಿನವರು ಕಾನೂನುತಜ್ಞರ ಅಭಿಪ್ರಾಯವನ್ನು ಪರಿಗಣಿಸುತ್ತಾರೆ ಎಂದರೆ ಸರಿ. ನಾನು ಫೆಡರಲ್ ಬ್ಯಾಂಕಿನಲ್ಲಿ ಸಾಲ ಪಡೆದುಕೊಳ್ಳುವ ಕಾಲಕ್ಕೆ ದಾವಾ ಸ್ವತ್ತಿನ ಕುರಿತು ವಾದಿಯ ಹೆಸರಿಗೆ ಏರ್ಪಟ್ಟಿದ್ದಂತಹ ಕ್ರಯಪತ್ರದ ಕುರಿತು ಋಣಭಾರ ರಾಹಿತ್ಯ ಪ್ರಮಾಣ ಪತ್ರದಲ್ಲಿ ಉಲ್ಲೇಖ ಆಗದಂತೆ ದಾಖಲಾತಿಯನ್ನು ಸೃಷ್ಟಿಸಿಕೊಂಡು ಸಾಲ ಪಡೆದುಕೊಂಡಿದ್ದು, ಆ ವಿಚಾರ ಫೆಡರಲ್ ಬ್ಯಾಂಕಿನವರಿಗೆ ತಿಳಿದ ನಂತರದಲ್ಲಿ ನಾನು ಚಿಕ್ಕಜಾಜೂರಿನ ಕೆನರಾ ಬ್ಯಾಂಕಿನಲ್ಲಿ ದಿನಾಂಕ 18.01.2025 ರಂದು ರೂ.18,00,000/- ಸಾಲ ಪಡೆದುಕೊಂಡು ದಿನಾಂಕ 25.01.2025 ರಂದು ಫೆಡರಲ್ ಬ್ಯಾಂಕಿನ ಸಾಲವನ್ನು ತೀರಿಸಿರುತ್ತೇನೆ ಎಂದರೆ ಸಾಕ್ಷಿ ನಾನು ಚಿಕ್ಕಜಾಜೂರಿನ ಕೆನರಾ ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡು ಫೆಡರಲ್ ಬ್ಯಾಂಕಿನ ಸಾಲವನ್ನು ತೀರಿಸಿರುತ್ತೇನೆ ಎಂದು ಹೇಳುತ್ತಾರೆ. ಮುಂದುವರೆದು ಋಣಭಾರ ರಾಹಿತ್ಯ ಪ್ರಮಾಣ ಪತ್ರದಲ್ಲಿ ಯಾವುದೇ ಸೃಷ್ಟನೆಯನ್ನು ಮಾಡಿಲ್ಲ ಎಂದು ಹೇಳುತ್ತಾರೆ.

7. 2002 ನೇ ಸಾಲಿನಿಂದ 2025 ನೇ ಸಾಲಿನವರೆಗೆ ನಾನು ಸುಮಾರು 60 ಕ್ರಯಪತ್ರಗಳನ್ನು ನೋಂದಣಿ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನಗೆ ಶುದ್ಧ ಕ್ರಯಪತ್ರದ ಕುರಿತು ಹಾಗೂ ಅಡಮಾನ ಪತ್ರದ ಕುರಿತು ತಿಳುವಳಿಕೆ ಇದೆ.

8. ಹೊಳಲ್ಕೆರೆಯ ನ್ಯಾಯಾಲಯದಲ್ಲಿ ಎಂ.ಆರ್. ಮಧು ಎಂಬುವವರು ನನ್ನ ವಿರುದ್ಧ ಸಿ.ಸಿ. 47/2017 ರಲ್ಲಿ ವಂಚನೆಯ ಕುರಿತಾಗಿ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸಾಕ್ಷಿ ನಾನು ಎಂ.ಆರ್. ಮಧು ರವರಿಂದ ಮನೆ ಕಟ್ಟಲು ಸಾಲ ಪಡೆದಿದ್ದು, ಆ ಬಗ್ಗೆ ಸಾಲದ ವಸೂಲಾತಿಯ ಕುರಿತು ಪ್ರಕರಣ ದಾಖಲಿಸಿದ್ದರು, ನಂತರ ನಾನು ಸಾಲವನ್ನು ಮರುಪಾವತಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಸರೋಜಮ್ಮ ಎಂಬುವವರು ಸಹ ನನ್ನ ವಿರುದ್ಧ ಸಿ.ಸಿ. 776/2017 ರಲ್ಲಿ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸಾಕ್ಷಿ ನಾನು ಸರೋಜಮ್ಮ ರವರಿಂದ ಸಾಲ ಪಡೆದಿದ್ದು, ಆ ಬಗ್ಗೆ ಸಾಲದ ವಸೂಲಾತಿಯ ಕುರಿತು ಪ್ರಕರಣ ದಾಖಲಿಸಿದ್ದರು, ನಂತರ ನಾನು ಸಾಲವನ್ನು ಮರುಪಾವತಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಬಿ.ಆರ್. ರಮೇಶ್ ಎಂಬುವವರು ಸಹ ನನ್ನ ವಿರುದ್ಧ ಸಿ.ಸಿ. 517/2013 ರಲ್ಲಿ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸಾಕ್ಷಿ ನಾನು ಬಿ.ಆರ್.ರಮೇಶ್‌ರವರಿಂದ ಸಾಲ ಪಡೆದಿದ್ದು, ಆ ಬಗ್ಗೆ ಸಾಲದ ವಸೂಲಾತಿಯ ಕುರಿತು ಪ್ರಕರಣ ದಾಖಲಿಸಿದ್ದರು, ನಂತರ ನಾನು ಸಾಲವನ್ನು ಮರುಪಾವತಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಅಂತೆಯೇ ನನ್ನ ವಿರುದ್ಧ ಎಂ.ನಾಗರಾಜರವರು ಸಿ.ಸಿ. 417/2014 ರಂತೆ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸಾಕ್ಷಿ ನಾನು ಎಂ.ನಾಗರಾಜರುರವರಿಂದ ಸಾಲ ಪಡೆದಿದ್ದು, ಆ ಬಗ್ಗೆ ಸಾಲದ ವಸೂಲಾತಿಯ ಕುರಿತು ಪ್ರಕರಣ ದಾಖಲಿಸಿದ್ದರು, ನಂತರ ನಾನು ಸಾಲವನ್ನು ಮರುಪಾವತಿ ಮಾಡಿದ್ದೇನೆ ಎಂದು ಹೇಳುತ್ತಾರೆ.

9. ಅಂತೆಯೇ ನನ್ನ ವಿರುದ್ಧ ಹೆಚ್.ಕೆ.ಕೃಷ್ಣಪ್ಪರವರು ಸಿ.ಸಿ. 246/2014, ಶಂಕರವಿಜಯ ಶಾಮಿಲ್, ಹೊಳಲ್ಕೆರೆರವರು ಸಿ.ಸಿ.205/2014 ರಂತೆ, ಉಮೇಶಪ್ಪರವರು ಸಿ.ಸಿ.500/2014 ರಂತೆ, ಹೊನ್ನೂರ್ ಸಾಬ್ ರವರು ಸಿ.ಸಿ.567/2014 ರಂತೆ, ಹೆಚ್.ಕೆ.ಕೃಷ್ಣಪ್ಪರವರು ಸಿ.ಸಿ.1/2015 ರಂತೆ, ಆರ್.ಮಂಜುನಾಥ್‌ರವರು ಸಿ.ಸಿ.689/2015 ರಂತೆ, ಪಿ.ಬಿ.ವಿಜಯಕುಮಾರ್ ರವರು ಸಿ.ಸಿ.452/2015 ರಂತೆ, ಆರ್.ಶಾಂತ್‌ಕುಮಾರ್‌ರವರು ಪಿ.ಸಿ.ಆರ್. 39/2015 ರಂತೆ, ರಾಜಪ್ಪರವರು ಪಿ.ಸಿ.ಆರ್.49/2015 ರಂತೆ, ಹೆಚ್.ಕೆ.ಕೃಷ್ಣಪ್ಪರವರು ಸಿ.ಸಿ.1169/2015 ರಂತೆ, ಜಿ.ಕೆ.ವಿವೇಕ್‌ರವರು ಸಿ.ಸಿ.872/2015 ರಂತೆ, ದೇವೀರಮ್ಮ ರವರು ಸಿ.ಸಿ.215/2016 ರಂತೆ, ಹೆಚ್.ಎಂ.ಚಂದ್ರಪ್ಪರವರು ಸಿ.ಸಿ.710/2016 ರಂತೆ, ಆರ್.ಮಂಜುನಾಥ್‌ರವರು ಸಿ.ಸಿ.322/2015 ರಂತೆ, ಆರ್.ಶಾಂತ್‌ಕುಮಾರ್ ಸಿ.ಸಿ.294/2015 ರಂತೆ, ಕೆ.ದಿನಕರ್ ರವರು ಸಿ.ಸಿ.625/2015, ಶ್ರೀಮತಿ ಶೋಭಾ ರವರು ಸಿ.ಸಿ.965/2016 ರಂತೆ, ಡಿ.ಆರ್.ತಿಪ್ಪೇಸ್ವಾಮಿರವರು ಸಿ.ಸಿ.963/2016 ರಂತೆ, ಎನ್.ವಿಜಯ್‌ರವರು ಸಿ.ಸಿ.125/2017 ರಂತೆ, ಜಿ.ಆರ್.ಕೃಷ್ಣಪ್ಪರವರು ಸಿ.ಸಿ.205/2014 ರಂತೆ, ಕೃಷ್ಣಪ್ಪರವರು ಸಿ.ಸಿ.216/2014 ರಂತೆ, ಎನ್.ನಾಗರಾಜ್ ರವರು ಸಿ.ಸಿ.417/2014 ರಂತೆ, ಎಸ್.ಮಾರುತೇಶ್‌ರವರು ಸಿ.ಸಿ.418/2014 ರಂತೆ, ಉಮೇಶಪ್ಪರವರು ಸಿ.ಸಿ.500/2014 ರಂತೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದ ನಾನು ಈ ಮೇಲ್ಕಂಡರವರ ಬಳಿ ಮನೆಯನ್ನು ಕಟ್ಟಲು ಸಾಲ ಪಡೆದಿದ್ದು, ಆ ಕುರಿತು ಸಾಲದ ವಸೂಲಾತಿಯ ಕುರಿತು ಪ್ರಕರಣಗಳನ್ನು ದಾಖಲಿಸಿದ್ದರು, ನಂತರ ನಾನು ಸಾಲವನ್ನು ಮರುಪಾವತಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಈ ಮೇಲ್ಕಂಡ ಪ್ರಕರಣಗಳು ಮುಕ್ತಾಯಗೊಂಡಿವೆ ಎಂದು ಹೇಳುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಈ ದಾವೆಯ ವಾದಿ ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದು, ಆ ಕುರಿತು ನಾನು ಠಾಣಾ ಮೊಕದ್ದಮೆ ಸಂಖ್ಯೆ .316/2016 ರಲ್ಲಿ ಮಾನ್ಯ ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದಿದ್ದೇನೆ ಎಂದರೆ ಸರಿ. ಸದರಿ ಪ್ರಕರಣ ವಿಚಾರಣೆಗಾಗಿ ಬಾಕಿ ಇದೆ ಎಂದರೆ ಸರಿ.

10. ಪ್ರತಿವಾದ ಪತ್ರವನ್ನು ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ನಾನು ವಾದಿಗೆ ಕ್ರಯಪತ್ರ ಮಾಡಿಕೊಟ್ಟಿಲ್ಲ, ಬದಲಾಗಿ ಸಾಲದ ಭದ್ರತೆಗಾಗಿ ನಾಮಕಾವಸ್ತೆಯ ಕ್ರಯಪತ್ರವನ್ನು ಮಾಡಿಕೊಟ್ಟಿದ್ದು, ಆ ಕುರಿತು ಸಾಲದ ಹಣವನ್ನು ಪಡೆದುಕೊಂಡು ಕ್ರಯಪತ್ರವನ್ನು ರದ್ದುಪಡಿಸಿಕೊಡುವಂತೆ ಕೋರಿ ಪ್ರತಿಹಕ್ಕು ದಾವೆಯ ಪರಿಹಾರವನ್ನು ಕೋರಿಲ್ಲ. ನಾನು ನಿಪಿ.1 ರ ನೋಂದಣಿ ಕ್ರಯಪತ್ರದ ಕುರಿತು ಹಾಗೂ ನಿಡಿ.9 ರ ನೋಂದಣಿಯಾಗದ ಕರಾರು

ಪತ್ರದ ಕುರಿತು ವಾದಿಯ ವಿರುದ್ಧ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ನಿಡಿ.9 ರ ನೋಂದಣಿಯಾಗದ ಕರಾರು ಪತ್ರದ ಕುರಿತು ವಾದಿಗೆ ನನ್ನ ವಕೀಲರ ಮೂಲಕ ಕಾನೂನು ತಿಳುವಳಿಕೆ ನೋಟೀಸನ್ನು ನೀಡಿಲ್ಲ, ಸಾಕ್ಷಿ ಮುಂದುವರೆದು ಮೌಖಿಕವಾಗಿ ವಾದಿಯ ಬಳಿ ಸಾಲ ಮತ್ತು ಬಡ್ಡಿಯನ್ನು ಪಡೆದುಕೊಂಡು ಕ್ರಯಪತ್ರವನ್ನು ರದ್ದುಪಡಿಸಿಕೊಡುವಂತೆ ಕೇಳಿದ್ದೆನು. ನಿಡಿ.9 ರ ಕರಾರು ಪತ್ರದ ಪ್ರಕಾರ ಸಾಲ ಮತ್ತು ಬಡ್ಡಿಯನ್ನು ಪಾವತಿಸಲು ಸಿದ್ದನಿದ್ದೇನೆ ಎಂಬ ಬಗ್ಗೆ ಯಾವುದೆ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ